ವಸೂಲಾಗಬೇಕಾಗಿರುವ ಮಂತ್ರಿ ವಸೂಲಾದ ಮೊರಾಟ ತೆರಿಗೆ ಕುರಿತು.

ಪಿಪಿಳ್ಳ. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೮-೮೯ನೇ ಸಾಲಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವಸೂಲಿ ಮಾಡಬೇಕಾಗಿರುವ ತೆರಿಗೆ ಹಣ ಎಷ್ಟು ?

ಆ) ಈವರೆವಿಗೆ ವಸೂಲಾದ ತೆರಿಗೆ ಹಣದ ಮೊತ್ತ ಎಷ್ಟು?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿ).—

ಅ) ರೂ. ೧,೧೦೦-೦೦ ಕೋಟಿ.

ಆ) ೧೯೮೯ನೇ ಫೆಬ್ರವರಿ ತಿಂಗಳ ಕೊನೆಯವರೆಗೆ ಒಟ್ಟು ರೂ. ೯೨೮-೪೪ ಕೋಟಿ.

೧೯೮೮ನೇ ಸಾಲಿನಲ್ಲಿ ನಡೆದಿರುವ ಗೋಲಿಬಾರ್‌ಗಳ ಬಗ್ಗೆ

ಪಿಪಿ ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).— ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ಹಲವೆಡೆ ನಡೆದಿರುವ ಗೋಲೀಬಾರ್‌ಗಳ ಒಟ್ಟು ಸಂಖ್ಯೆ ಎಷ್ಟು?

ಆ) ಸದರಿ ಗೋಲೀಬಾರ್‌ನಿಂದ ಮೃತರಾದವರ ಸಂಖ್ಯೆ ಎಷ್ಟು ಹಾಗೂ ಮೃತಪಟ್ಟವರ ಕುಟುಂಬದವರಿಗೆ ಸರ್ಕಾರದವರು ನೀಡಿರುವ ಪರಿಹಾರದ ಮೊತ್ತವೆಷ್ಟು (ಪೂರ್ಣ ವಿವರಗಳನ್ನು ನೀಡುವುದು) ?

ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಪಿಪಿ

ಆ) ಮೃತಪಟ್ಟವರ ಸಂಖ್ಯೆ. ಪಿ
ಈ ಕೆಳಕಂಡಂತೆ ಪರಿಹಾರ ಮಂಜೂರು ಮಾಡಲಾಗಿದೆ.

ಗೋಲೀಬಾರ್ ಮಾಡಿದ ಸ್ಥಳ ಮತ್ತು ದಿನಾಂಕ	ಮೃತಪಟ್ಟವರ ಹೆಸರು	ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ನೀಡಿರುವ ಮೊತ್ತ
ಬಿಜಾಪುರ ಜಿಲ್ಲೆ ಯ ಬನಹಟ್ಟಿ ದಿ. ೧೭-೨-೮೮	ಬಸವಂತಪ್ಪ ಓಂಕಾರಪ್ಪ ಕೋಪರ್ಡೆ	ರೂ. ೨೦,೦೦೦
ಕೋಲಾರ ಜಿಲ್ಲೆಯ ಕ್ಯಾಲನೂರು ೧೮-೫-೮೮	ಮುನೇಗೌಡ ಅಲಿಯಾಸ್ ಚಿಕ್ಕಯ್ಯ ಬಿನ್ ತಮ್ಮಣ್ಣ	ರೂ. ೨೦,೦೦೦
ಬೆಂಗಳೂರು ಜಿಲ್ಲೆಯ ಸರ್ಜಾಪುರ ಪೋಲೀಸ್ ಠಾಣೆವ್ಯಾಪ್ತಿಯ ಆದಿಗರಕಲ್ಲಹಳ್ಳಿ ದಿ. ೮-೧೨-೮೮	ಪಮೂರ್	ಪರಿಹಾರ ನೀಡುವುದನ್ನು ಪರಿಶೀಲಿಸಲಾಗುತ್ತಿದೆ.